ನವಸಾಕ್ಷರ ಪುಸ್ತಕ ಮಾಲೆ ೧೦೪

ನಮ್ಮ ರಾಷ್ಟ್ರೀಯ ಚಿಹ್ನೆಗಳು

ಪಾರಿಜಾತ ಎಸ್. ಮೂರ್ತಿ



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಲೋಕಶಿಕ್ಷಣ ನಿರ್ದೇಶನಾಲಯ

ನವಸಾಕ್ಷರ ಪುಸ್ತಕ ಮಾಲೆ - ೧೦೪

ನಮ್ಮ ರಾಷ್ಟ್ರೀಯ ಚಿಹ್ನೆಗಳು

ಪಾರಿಜಾತ ಎಸ್. ಮೂರ್ತಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-೫೮೩ ೨೧೧

NAMMA RASHTRIYA CHINNEGALU : By Parijata S. Murthy. Published by The Director of Prasaranga, Kannada University, Hampi - 583 211, KARNATAKA.
First Impression 1994, Pp. i i + 26, Rs. 8.00.

ಸಂಯೋಜನಾಧಿಕಾರಿ
ಡಾ. ಎಚ್. ಎಸ್. ಶ್ರೀಮತಿ
ಪಠ್ಯ ಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ. ೮.೦೦

ಮುದ್ರಕರು
ಗುರುದತ್ ಪ್ರಿಂಟರ್ಸ್
೯೧, ೪ನೇ ಕ್ರಾಸ್, ೧ನೇ ಮೇನ್
ನ್ಯೂ ಟಿಂಬರ್‌ಯಾರ್ಡ್ ಲೇಔಟ್
ಮೈಸೂರು ರಸ್ತೆ,
ಬೆಂಗಳೂರು ೫೬೦ ೦೨೬


ನಮ್ಮ ರಾಷ್ಟ್ರೀಯ ಚಿಹ್ನೆಗಳು

ಭಾರತ ನಮ್ಮದೇಶ

ನಮ್ಮ ದೇಶದ ಭೂಪಟವನ್ನು ನೋಡಿ. ಉತ್ತರಕ್ಕೆ ಹಿಮಾಲಯ ಪರ್ವತ, ದಕ್ಷಿಣಕ್ಕೆ ಹಿಂದೂ ಮಹಾಸಾಗರ, ಪೂರ್ವಕ್ಕೆ ಬಂಗಾಳಕೊಲ್ಲಿ, ಪಶ್ಚಿಮಕ್ಕೆ ಅರಬ್ಬೀ ಸಮುದ್ರವಿದೆ. ಇವುಗಳ ನಡುವೆ ಇರುವ ವಿಶಾಲವಾದ ಭೂಭಾಗವೇ ನಮ್ಮ ಭಾರತದೇಶ. ಇದು ಏಷ್ಯಾಖಂಡದ ದೊಡ್ಡ ದೇಶಗಳಲ್ಲಿ ಒಂದು. ಪವಿತ್ರವಾದ ಗಂಗಾ, ಯಮುನಾ, ಗೋದಾವರಿ, ಕೃಷ್ಣ, ಕಾವೇರಿ ಮೊದಲಾದ ನದಿಗಳು ನಮ್ಮ ದೇಶದಲ್ಲಿ ಹರಿಯುತ್ತವೆ.

ನಮ್ಮ ದೇಶದಲ್ಲಿ ಎಷ್ಟೋ ಬಗೆಯ ಜನರು ವಾಸಿಸುತ್ತಿದ್ದಾರೆ. ಅವರು ಹಲವಾರು ಬಗೆಯ ಭಾಷೆಗಳನ್ನಾಡುತ್ತಾರೆ. ಬಗೆಬಗೆಯ ಮತಧರ್ಮಗಳಿವೆ. ಅವರಿಗೆ ತಮ್ಮದೇ ಆದ ಆಚಾರ ವ್ಯವಹಾರಗಳು ಇವೆ. ಊಟ-ತಿಂಡಿಗಳಿವೆ, ಉಡುಗೆ-ತೊಡುಗೆಗಳಿವೆ. ಸುಂದರವಾದ ಜನಪದಗೀತೆಗಳು, ನೃತ್ಯಗಳು ಮತ್ತು ಹಬ್ಬಗಳಿವೆ.

ಹೀಗೆ ಅನೇಕ ಆಚಾರ ವ್ಯವಹಾರಗಳು, ಭಾಷೆಗಳು, ಧರ್ಮಗಳಿದ್ದರೂ ನಮ್ಮ ಜನ ಸಾಮರಸ್ಯದಿಂದ ಅರಿತು ಬೆರೆತು ಒಂದಾಗಿ ಬಾಳುತ್ತಿದ್ದಾರೆ. ಇದನ್ನೇ



ನಮ್ಮ ದೇಶ ಭಾರತ

ವೈವಿಧ್ಯತೆಯಲ್ಲಿ ಏಕತೆ ಎನ್ನುವುದು. ಇದರಿಂದಾಗಿಯೇ ನಮ್ಮ ದೇಶ ಎಲ್ಲ ರಂಗಗಳಲ್ಲೂ ಅಭಿವೃದ್ಧಿಯನ್ನು ಹೊಂದುತ್ತಿದೆ.

ನಮ್ಮ ದೇಶವು ಅನೇಕ ಲಲಿತ ಕಲೆಗಳ ತವರು. ನಮ್ಮ ಶಿಲ್ಪಕಲೆ, ಚಿತ್ರಕಲೆ, ಶಾಸ್ತ್ರೀಯ ಸಂಗೀತ ನೃತ್ಯಗಳು ಪ್ರಪಂಚದಲ್ಲಿ ಹೆಸರು ಪಡೆದಿವೆ. ಅಜಂತ, ಎಲ್ಲೋರ ಗುಹೆಗಳ ದೇವಾಲಯಗಳು, ತಾಜ್‌ಮಹಲ್, ಕುತುಬ್‌ಮಿನಾರ್ ಕಟ್ಟಡಗಳು ಪ್ರಪಂಚದಲ್ಲಿಯೇ ಪ್ರಖ್ಯಾತವಾಗಿವೆ.

ನಮ್ಮ ರಾಷ್ಟ್ರೀಯ ಚಿಹ್ನೆಗಳು


ಪ್ರಪಂಚದ ಎಲ್ಲ ದೇಶಗಳೂ ತಮ್ಮ ತಮ್ಮ ಪರಂಪರೆ ಹಾಗೂ ಸಂಸ್ಕೃತಿ ವಿಶೇಷಗಳನ್ನು ಬಿಂಬಿಸುವ ಕೆಲವು ಚಿಹ್ನೆಗಳನ್ನು ಅಧಿಕೃತವಾಗಿ ರೂಪಿಸಿಕೊಂಡು ಬಳಸುತ್ತವೆ. ಈ ಚಿಹ್ನೆಗಳನ್ನು ರಾಷ್ಟ್ರೀಯಚಿಹ್ನೆಗಳು ಎನ್ನುತ್ತಾರೆ.

ನಮ್ಮ ಭಾರತ ದೇಶದ ಪರಂಪರೆ ಹಾಗೂ ಸಂಸ್ಕೃತಿಗಳ ವಿಶೇಷಗಳನ್ನು ಬಿಂಬಿಸುವ ಕೆಲವು ಚಿಹ್ನೆಗಳು ಭಾರತದ ರಾಷ್ಟ್ರೀಯಸಂಕೇತಗಳೆಂದು ಅಂಗೀಕಾರವಾಗಿವೆ. ಇಂತಹ ಸಂಕೇತಗಳನ್ನು ದೇಶದ ಹಿರಿಯ ನಾಯಕರು ಸೇರಿ ಸೂಚಿಸುತ್ತಾರೆ. ಒಂದೊಂದು ಸಂಕೇತದಲ್ಲೂ ಹಲವಾರು ವಿಶೇಷ ಅರ್ಥಗಳು ಅಡಗಿರುತ್ತವೆ. ಬಹಳವಾಗಿ ಯೋಚಿಸಿ, ಚರ್ಚಿಸಿ ಇವು ರಾಷ್ಟ್ರೀಯಸಂಕೇತಗಳು ಎಂಬ ತೀರ್ಮಾನಕ್ಕೆ ಮೊದಲು ಬಂದ ಮೇಲೆ ಸಂವಿಧಾನದಲ್ಲಿ ಅದು ಅಂಗೀಕಾರವಾಗುತ್ತದೆ.

ಹೀಗೆ ಸಂವಿಧಾನದಲ್ಲಿ ಅಂಗೀಕಾರವಾದ ಮೇಲೆ ಅದಕ್ಕೆ ಅಧಿಕೃತತೆ ಬರುತ್ತದೆ. ನಮ್ಮ ದೇಶದ ಸಂವಿಧಾನದಲ್ಲಿ ಹೀಗೆ ಅಂಗೀಕಾರವಾದ ರಾಷ್ಟ್ರೀಯಚಿಹ್ನೆಗಳಲ್ಲಿ ರಾಷ್ಟ್ರಧ್ವಜ, ರಾಷ್ಟ್ರಗೀತೆ, ರಾಷ್ಟ್ರದ ಧ್ಯೇಯವಾಕ್ಯ, ರಾಷ್ಟ್ರಪ್ರಾಣಿ, ರಾಷ್ಟ್ರಪಕ್ಷಿ, ರಾಷ್ಟ್ರಪುಷ್ಪ ಇವಿಷ್ಟು ಸೇರಿವೆ. ಇವಲ್ಲದೆ ರಾಷ್ಟ್ರದ ಪ್ರಮುಖ ಘಟನೆಗಳನ್ನು ಸೂಚಿಸುವ ರಾಷ್ಟ್ರೀಯ ಹಬ್ಬಗಳನ್ನು ಸಹ ನಮ್ಮ ರಾಷ್ಟ್ರೀಯ ಸಂಕೇತಗಳೆಂದೇ ತಿಳಿಯಲಾಗುತ್ತದೆ. ಇವುಗಳಿಗೆಲ್ಲ ಅಧಿಕೃತ ಒಪ್ಪಿಗೆಯನ್ನು ನೀಡುವ ನಮ್ಮ ಸಂವಿಧಾನವನ್ನು ಸಹ ಒಂದು ರಾಷ್ಟ್ರೀಯ ಸಂಕೇತವೆಂದೇ ತಿಳಿಯಲಾಗುತ್ತದೆ.

ಈಗ ಈ ಒಂದೊಂದು ಸಂಕೇತವನ್ನೂ ವಿವರವಾಗಿ ತಿಳಿಯೋಣ. ಅವುಗಳು ರೂಪುಗೊಂಡ ಹಿನ್ನೆಲೆ, ಅವುಗಳಿಗೆ ಇರುವ ಅರ್ಥ ಹಾಗೂ ಅವುಗಳಿಗೆ ನಾವು ಏಕೆ ಮತ್ತು ಹೇಗೆ ಗೌರವ ತೋರಬೇಕೆಂಬ ಬಗೆ ಇವುಗಳನ್ನು ನಾವು ತಿಳಿಯಬೇಕು. ಆಗ ಇವು ಕೇವಲ ಸಂಕೇತಗಳಾಗಿ ನಿಲ್ಲದೆ ಅರ್ಥಪೂರ್ಣವೆನಿಸುತ್ತವೆ. ನಮ್ಮ ದೇಶದ ಬಗೆಗೆ ಗೌರವ ಆದರಗಳನ್ನು ಮೂಡಿಸುವಲ್ಲಿ, ನಮ್ಮೆಲ್ಲರನ್ನು ಒಂದಾಗಿಸುವಲ್ಲಿ ನೆರವಾಗುತ್ತವೆ.

ನಮ್ಮ ಸಂವಿಧಾನ



ಸಂವಿಧಾನ ಶಿಲ್ಪಿ ಡಾ|| ಬಿ. ಆರ್. ಅಂಬೇಡ್ಕರ್

ನಮ್ಮ ದೇಶವು ಸಾವಿರದ ಒಂಬೈನೂರಾ ನಲವತ್ತೇಳರ ಆಗಸ್ಟ್ ಹದಿನೈದ ರಂದು ಸ್ವತಂತ್ರವಾಯಿತು. ನಂತರ ತನ್ನದೇ ಆದ ಆಡಳಿತ ರೀತಿನೀತಿಗಳನ್ನು ರೂಪಿಸಿಕೊಂಡಿತು. ಅದರಂತೆ ಭಾರತರತ್ನ ಡಾ. ಬಾಬು ರಾಜೇಂದ್ರಪ್ರಸಾದ್ ಅವರ

ಅಧ್ಯಕ್ಷತೆಯಲ್ಲಿ ರಾಜ್ಯಾಂಗ ರಚನಾ ಸಭೆಯನ್ನು ರಚಿಸಲಾಯಿತು. ಸಂವಿಧಾನದ ಕರಡು ಸಮಿತಿಗೆ ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರು ಅಧ್ಯಕ್ಷರಾದರು. ಅವರೇ ಸ್ವತಂತ್ರಭಾರತದ ಸಂವಿಧಾನ ಶಿಲ್ಪಿ.

ಸುವ್ಯವಸ್ಥಿತವಾದ ಆಡಳಿತ ನೀತಿನಿಯಮಗಳ ದಾಖಲೆಯೇ ಸಂವಿಧಾನ. ಇದು ಸಾವಿರದ ಒಂಬೈನೂರಾ ಐವತ್ತರ ಜನವರಿ ಇಪ್ಪತ್ತಾರರಂದು ಜಾರಿಗೆ ಬಂದಿತು. ಅಂದಿನಿಂದ ಭಾರತವು ಗಣರಾಜ್ಯವಾಯಿತು. ರಾಷ್ಟ್ರದ ಆಡಳಿತ ಪದವಿಗಳಿಗೆ ಸಾಮಾನ್ಯ ಪ್ರಜೆಯೂ ಆಯ್ಕೆಯಾಗಬಹುದು. ಸಂವಿಧಾನವು ಆಡಳಿತದ ಮೂಲತತ್ವಗಳನ್ನು ಹಾಗೂ ರಾಷ್ಟ್ರೀಯ ಗುರಿಗಳನ್ನು ತಿಳಿಸುತ್ತದೆ.

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು. ಇದು ಪ್ರಜೆಗಳಿಂದ ಪ್ರಜೆಗಳಿಗಾಗಿ ನಡೆಯುವ ಸರ್ಕಾರ. ಮತದಾರರು ಇದಕ್ಕೆ ಚುನಾವಣೆಯ ಮೂಲಕ ತಮ್ಮ ಒಪ್ಪಿಗೆ ನೀಡುವರು. ಇದನ್ನು ಮತದಾನ ಎನ್ನುತ್ತೇವೆ. ಲೋಕಸಭೆ ಮತ್ತು ವಿಧಾನಸಭೆಯ ಸಧಸ್ಯರನ್ನು ಪ್ರಜೆಗಳು ಆರಿಸುತ್ತಾರೆ.

ಸಮಾಜವಾದವು ಉತ್ಪಾದನೆಯನ್ನು ಹೆಚ್ಚಿಸುವ ಮತ್ತು ಜನರ ನಡುವೆ ಸಂಪತ್ತಿನ ಉತ್ತಮ ವಿತರಣೆ ಮಾಡುವ ಗುರಿಯನ್ನು ಇಟ್ಟುಕೊಂಡಿದೆ. ಇದು ಬಡತನವನ್ನು ನಿವಾರಿಸಿ, ಕೆಲವೇ ಜನರು ಅತಿ ಶ್ರೀಮಂತರಾಗುವುದನ್ನು ತಪ್ಪಿಸುತ್ತದೆ. ಸಮಾಜವಾದವನ್ನು ಶಾಸನ, ರಾಷ್ಟ್ರೀಕರಣ ಮತ್ತು .ಸಾಮಾಜಿಕ ಅಭಿವೃದ್ಧಿಯ ಚಟುವಟಿಕೆಗಳಿಂದ ಸಾಧಿಸಬಹುದು.

ಜಾತ್ಯಾತೀತ ಲಕ್ಷಣ

ಭಾರತವು ಸಂವಿಧಾನದ ಪ್ರಕಾರ ಒಂದು ಜಾತ್ಯಾತೀತ ರಾಷ್ಟ್ರ. ಇಲ್ಲಿಯ ಪ್ರಜೆಗಳು ಮತಧರ್ಮ ಮತ್ತು ಪೂಜಾವಿಧಾನದ ಸ್ವಾತಂತ್ರ್ಯವನ್ನು ಹೊಂದಿರುತ್ತಾರೆ.

ಭಾರತದ ಯಾವ ಪ್ರಜೆಯಾದರೂ ಅತ್ಯುನ್ನತ ಅಧಿಕಾರ ಸ್ಥಾನವಾದ ರಾಷ್ಟ್ರಾಧ್ಯಕ್ಷನ ಹುದ್ದೆಯನ್ನು ಅಲಂಕರಿಸಬಹುದು.

ರಾಷ್ಟ್ರೀಯ ಸಮಗ್ರತೆ

ಇದು ಜನರಲ್ಲಿ ಐಕ್ಯತೆಯ ಭಾವನೆ, ಪರಸ್ಪರ ತಿಳುವಳಿಕೆ, ಕಾನೂನಿನ ಸಮಾನತೆ, ಸಹೋದರತೆಯನ್ನು ಪ್ರೋತ್ಸಾಹಿಸುತ್ತದೆ.

ಸಂಯುಕ್ತ ಗಣರಾಜ್ಯ

ನಮ್ಮ ಸಂವಿಧಾನವು ಸಂಯುಕ್ತ ಗಣರಾಜ್ಯವನ್ನು ಸ್ಥಾಪಿಸಿದೆ. ಗಣರಾಜ್ಯದಲ್ಲಿ ಅತ್ಯುನ್ನತ ಸ್ಥಾನವು ಚುನಾವಣೆಯಿಂದ ಭರ್ತಿಯಾಗುತ್ತದೆ. ನಮ್ಮದು ಒಂದು ಲಿಖಿತ ಸಂವಿಧಾನ. ಇದರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇರುತ್ತವೆ. ಈ ಎರಡೂ ಸರ್ಕಾರಗಳ ನಡುವೆ ಅಧಿಕಾರ ಹಂಚಿಕೆಯಾಗಿರುತ್ತದೆ. ಇದು ಸ್ವತಂತ್ರ ನ್ಯಾಯಾಂಗವನ್ನು ಹೊಂದಿರುತ್ತದೆ. ನ್ಯಾಯಾಂಗವು ಪೌರರ ಮೂಲಭೂತ ಹಕ್ಕುಗಳ ರಕ್ಷಣೆ ಮಾಡುತ್ತದೆ.

ಸಂಸತ್ತಿನ ಸಾರ್ವಭೌಮತ್ವ

ಸಂಸತ್ತು ಜನರಿಂದ ಚುನಾಯಿಸಲ್ಪಟ್ಟ ಶಾಸಕಾಂಗವಾಗಿದೆ. ಸಂಸತ್ತಿನ ಶಾಸನಗಳು ದೇಶದಾದ್ಯಂತ ಅನ್ವಯವಾಗುತ್ತದೆ. ಜನರು ಅವುಗಳನ್ನು ಪಾಲಿಸಬೇಕು. ಸಂಸತ್ತು ಭಾರತದ ಉಪರಾಷ್ಟ್ರಾಧ್ಯಕ್ಷನನ್ನು ಚುನಾಯಿಸುತ್ತದೆ. ಜೊತೆಗೆ ರಾಷ್ಟ್ರಾಧ್ಯಕ್ಷನ ಚುನಾವಣೆಯಲ್ಲೂ ಭಾಗವಹಿಸುತ್ತದೆ.

ಸಂಸತ್ತಿನಲ್ಲಿ ಎರಡು ಸಭೆಗಳಿವೆ. ೧. ಲೋಕಸಭೆ, ೨. ರಾಜ್ಯಸಭೆ. ಲೋಕಸಭೆಯ ಪ್ರತಿನಿಧಿ ಪ್ರತಿ ಐದು ವರ್ಷಗಳಿಗೊಮ್ಮೆ ಜನರಿಂದ


ಚುನಾಯಿತನಾಗುತ್ತಾನೆ. ಸುಮಾರು ಏಳು ಲಕ್ಷ ಜನರಿಗೆ ಒಬ್ಬ ಪ್ರತಿನಿಧಿ ಲೋಕಸಭೆಗೆ ಚುನಾಯಿತನಾಗುವನು. ಇವರನ್ನು ಹದಿನೆಂಟು ವರ್ಷದ ಭಾರತೀಯರೆಲ್ಲರೂ ಚುನಾಯಿಸುವರು.

ನ್ಯಾಯಾಂಗವು ಸಂವಿಧಾನಕ್ಕೆ ಅನುಗುಣವಾಗಿ ತನ್ನ ಕಾರ್ಯವನ್ನು ನಿರ್ವಹಿಸುತ್ತದೆ. ಸಂಸತ್ತಿನ ಶಾಸನವೊಂದು ಸಂವಿಧಾನಕ್ಕೆ ವಿರುದ್ಧವಾಗಿದ್ದರೆ ನ್ಯಾಯಾಂಗವು ತೀರ್ಪು ನೀಡಿ ಅಂತಹ ಶಾಸನವನ್ನು ಜಾರಿಗೊಳಿಸುವಂತಿಲ್ಲ. ದೇಶದ ಹೊಣೆಗಾರರಾದ ನಾಗರಿಕರೆಲ್ಲಾ ನಮ್ಮ ಸಂವಿಧಾನವನ್ನು ಗೌರವಿಸಬೇಕು.

ನಮ್ಮ ರಾಷ್ಟ್ರಧ್ವಜ

ಭಾರತದ ಮೂರು ಬಣ್ಣಗಳ ರಾಷ್ಟ್ರಧ್ವಜವನ್ನು ಸಾವಿರದ ಒಂಬೈನೂರಾ ನಲವತ್ತೇಳು ಜುಲೈ ಇಪ್ಪತ್ತೆರಡರಂದು ರಾಜ್ಯಾಂಗ ರಚನಾಸಭೆ ಅಂಗೀಕರಿಸಿತು. ಇದರ ಬಣ್ಣಗಳು ಕೇಸರಿ, ಬಿಳಿ ಹಾಗೂ ಹಸಿರು. ಒಳಪಟ್ಟಿಯ ನಡುವೆ ಕಡುನೀಲಿ ಬಣ್ಣದ ಅಶೋಕಚಕ್ರವಿದೆ. ಧ್ವಜದ ಅಗಲ ಉದ್ದ ಮೂರು ಪಾಲು ಇರಬೇಕು.

ನಮ್ಮ ರಾಷ್ಟ್ರಧ್ವಜದ ಇತಿಹಾಸವನ್ನು ಸ್ವಲ್ಪ ತಿಳಿಯೋಣ. ಬಂಗಾಳದ ವಿಭಜನೆಯ ಮರುವರ್ಷ, ಅಂದರೆ ಸಾವಿರದ ಒಂಬೈನೂರಾ ಆರರ ಆಗಸ್ಟ್ ಏಳರಂದು ಕಲ್ಕತ್ತಾದ ಗ್ರೀನ್‌ಪಾರ್ಕಿನಲ್ಲಿ ಸ್ವಾತಂತ್ರ್ಯಪೂರ್ವ ಭಾರತದ ಮೊತ್ತ ಮೊದಲಿನ ರಾಷ್ಟ್ರಧ್ವಜ ಹಾರಿಸಲಾಯಿತು. ಇದಕ್ಕೆ ಅನುಕ್ರಮವಾಗಿ ಕೆಂಪು, ಹಳದಿ, ಹಸಿರು ಬಣ್ಣಗಳ ಪಟ್ಟಿಗಳಿದ್ದು ಕೆಂಪುಪಟ್ಟಿಯ ಮೇಲೆ ಬಿಳಿಯ ಕಮಲದ ಹೂಗಳು, ಹಳದಿಯ ಮೇಲೆ ವಂದೇಮಾತರಂ ಎಂಬ ಗಾಢ ನೀಲಿಬಣ್ಣದ ಅಕ್ಷರಗಳು, ದೇವನಾಗರಿ ಲಿಪಿಯಲ್ಲಿ ಹಸಿರುಪಟ್ಟಿಯ ಮೇಲೆ ಒಂದು ಕಡೆಗೆ ಸೂರ್ಯ ಮತ್ತೊಂದು ಕಡೆಗೆ ಬಾಲಚಂದ್ರ ಹಾಗೂ ನಕ್ಷತ್ರ ಚಿತ್ರಿತವಾಗಿತ್ತು. ಅದೇ ವರ್ಷ ಎರಡನೇ ರಾಷ್ಟ್ರಧ್ವಜವನ್ನು ಮದಾಮ್‌ಕಾಮಾ ಮುಂತಾದವರು ಪ್ಯಾರಿಸ್ಸಿನಲ್ಲಿ ಹಾರಿಸಿದರು. ಇದು ಬಹುಮಟ್ಟಿಗೆ ಮೊದಲನೆಯದನ್ನು ಹೋಲುತ್ತಿತ್ತು. ಅನಿಬೆಸೆಂಟ್ ಹಾಗೂ



ಭಾರತದ ರಾಷ್ಟ್ರಧ್ವಜ

ತಿಲಕರು ಹೋಂರೂಲ್ ಚಳುವಳಿಯ ಸಮಯದಲ್ಲಿ ಸಪ್ತರ್ಷಿ ಮಂಡಲದ ನಕ್ಷತ್ರ ವಿನ್ಯಾಸವೂ, ಬ್ರಿಟಿಷರ ಧ್ವಜಚಿಹ್ನೆಯೂ ಚಂದ್ರ, ನಕ್ಷತ್ರಗಳೂ ಇರುವ ಕೆಂಪು ಹಸಿರುಪಟ್ಟಿಗಳ ಧ್ವಜ ಹಾರಿಸಿದರು.

ಸಾವಿರದ ಒಂಬೈನೂರಾ ಇಪ್ಪತ್ತೊಂದರಿಂದ ಸಾವಿರದ ಒಂಬೈನೂರಾ ಮೂವತ್ತೊಂದರವರೆಗೆ ಗಾಂಧೀಜಿ ಅನುಮೋದಿಸಿದ ಬಿಳಿ, ಹಸಿರು ಮತ್ತು ಕೆಂಪು ಪಟ್ಟಿಗಳ, ಚರಕಾ ಚಿಹ್ನೆಯಿರುವ ಧ್ವಜ, ಕಾಂಗ್ರೆಸ್ ಅಧಿವೇಶನ ಹಾಗೂ ಇತರ ಸಂದರ್ಭಗಳಲ್ಲಿ ಹಾರಿಸಲಾಗುತ್ತಿತ್ತು. ಸಾವಿರದ ಒಂಬೈನೂರಾ ಮೂವತ್ತೊಂದ ರಂದು ಕರಾಚಿ ಕಾಂಗ್ರೆಸ್ ಅಧಿವೇಶನದಲ್ಲಿ ಕೇಸರಿ, ಬಿಳಿ ಹಾಗೂ ಹಸಿರು ಬಣ್ಣವಿರುವ, ಚರಕ ಚಿಹ್ನೆಯಿರುವ ಧ್ವಜವನ್ನು ಅಧಿಕೃತವಾಗಿ ಅಂಗೀಕರಿಸಿದರು. ಕೇಸರಿ ಸ್ಥೈರ್ಯ ತ್ಯಾಗಗಳನ್ನು, ಬಿಳಿ ಸತ್ಯ ಶಾಂತಿಗಳನ್ನೂ, ಹಸಿರು ಭರವಸೆ ಶೌರ್ಯಗಳನ್ನು ಪ್ರತಿನಿಧಿಸುವುದೆಂದು ವಿವರಿಸಲಾಯಿತು. ಭಾರತ ಸ್ವಾತಂತ್ರ್ಯ ಪಡೆದ ಮೇಲೆ ಚರಕಾ ಬದಲಾಗಿ ಕಡುನೀಲಿ ಬಣ್ಣದ ಅಶೋಕ ಚಕ್ರವನ್ನು ಬಿಳಿಪಟ್ಟಿಯಲ್ಲಿ ಬರುವಂತೆ ಅಳವಡಿಸಿದರು.

ರಾಷ್ಟ್ರಧ್ವಜ ನಿಯಮಾವಳಿಗಳು

೧. ರಾಷ್ಟ್ರಧ್ವಜಾರೋಹಣ ಸಮಯದಲ್ಲಿ ಇದರ ಮಹತ್ವ ಮತ್ತು ಗೌರವವನ್ನು ಗಮನದಲ್ಲಿಟ್ಟುಕೊಂಡಿರಬೇಕು.

೨. ಧ್ವಜ ಹಾರಿಸುವಾಗ ಕೇಸರಿ ಬಣ್ಣ ಯಾವಾಗಲೂ ಮೇಲಿನದಾಗಿರಬೇಕು.

೩. ಯಾವುದಾದರೂ ಅವಸರದ ಸಂದರ್ಭದಲ್ಲಿ ಧ್ವಜವನ್ನು ಮತ್ತೊಂದರ ಜೊತೆ ಹಾರಿಸಿದಾಗ ರಾಷ್ಟ್ರಧ್ವಜವನ್ನು ಉಳಿದ ಧ್ವಜಗಳಿಂದ ಎಡಗಡೆ ಹಾರಿಸಬೇಕು. ಇದು ಎಲ್ಲ ಧ್ವಜಗಳಿಗಿಂತ ಮೇಲೆ ಇರುವಂತೆ ಹಾರಿಸಬೇಕು.

೪. ರಾಷ್ಟ್ರಧ್ವಜವನ್ನು ಬೆಳಿಗ್ಗೆ ಹಾರಿಸಬೇಕು.

೫. ಸೂರ್ಯನು ಮುಳುಗುವ ಸಮಯದಲ್ಲಿ ಧ್ವಜವನ್ನು ಗೌರವದಿಂದ ಇಳಿಸಬೇಕು.

೬. ರಾಷ್ಟ್ರಧ್ವಜಕ್ಕೆ ಉಪಯೋಗಿಸುವ ವಸ್ತ್ರ ಹತ್ತಿಯ ಖಾದಿ ಅಥವಾ ಕೈಯಿಂದ ನೇಯ್ದ ರೇಷ್ಮೆ ಬಟ್ಟೆಯದಾಗಿರಬೇಕು.

೭. ಹರಿದ ಅಥವಾ ಕೊಳೆಯ, ಹಳೆಯ ಧ್ವಜವನ್ನು ಹಾರಿಸಬಾರದು.

೮. ಧ್ವಜವನ್ನು ಸುತ್ತಿಡಬೇಕು. ನೆಲಕ್ಕೆ ತಾಗದಂತೆ ನೋಡಿಕೊಳ್ಳಬೇಕು.

೯. ಧ್ವಜದ ಬಲಗಡೆ ಹಾಗೂ ಮೇಲೆ ಯಾವುದೇ ಚಿಹ್ನೆಯನ್ನು ಇಡಬಾರದು.

೧೦. ರಾಷ್ಟ್ರೀಯ ಶೋಕವನ್ನಾಚರಿಸುವ ಸಮಯದಲ್ಲಿ ಧ್ವಜವನ್ನು ಅರ್ಧ ಎತ್ತರಕ್ಕೆ ಹಾರಿಸಬೇಕು. ಮೊದಲು ಧ್ವಜವನ್ನು

ಗೌರವದಿಂದ ಮೇಲಿನ ತನಕ ಏರಿಸಿ ನಂತರ ನಿಧಾನವಾಗಿ ಧ್ವಜವನ್ನು ಕೆಳಕ್ಕೆ ಇಳಿಸಿ ದಾರದಿಂದ ಕಟ್ಟಲಾಗುವುದು. ಸಂಜೆ ಧ್ವಜವನ್ನು ಇಳಿಸುವ ಸಂದರ್ಭದಲ್ಲಿ ಮೇಲಿನ ತನಕ ಏರಿಸಿ ಮತ್ತೆ ಗೌರವದಿಂದ ಇಳಿಸಲಾಗುವುದು.

೧೧. ಲೋಕಸಭೆ, ವಿಧಾನಸಭೆ, ಮಂತ್ರಿಗಳ ನಿವಾಸಸ್ಥಾನದಲ್ಲಿ ಧ್ವಜವನ್ನು ಯಾವಾಗಲೂ ಭದ್ರತಾ ಕಾವಲಿನವರಿಂದ ಗೌರವಪೂರ್ವಕವಾಗಿ ಹಾರಿಸಲಾಗುತ್ತದೆ. ಅವರ ವಾಹನಗಳ ಮೇಲೆಯೂ ಧ್ವಜ ಇರುತ್ತದೆ.

೧೨. ಸಾರ್ವಜನಿಕರು ತಮ್ಮ ಮನೆ, ಅಂಗಡಿ ಅಥವಾ ಪಾರ್ಕ್ ಮುಂತಾದ ಸ್ಥಳಗಳಲ್ಲಿ ರಾಷ್ಟ್ರೀಯ ಹಬ್ಬಗಳಂದು ಮಾತ್ರ ಧ್ವಜವನ್ನು ಹಾರಿಸಬೇಕು.

೧೩. ಗಣರಾಜ್ಯೋತ್ಸವದ ದಿನ ಸೈನ್ಯದ ಮೆರವಣಿಗೆಯಲ್ಲಿ ಧ್ವಜವನ್ನು ಯಾವಾಗಲೂ ಬಲಗಡೆ ಭುಜದ ಮೇಲೆ ಎತ್ತಿಕೊಂಡು ನಡೆಯಬೇಕು. ರಾಷ್ಟ್ರೀಯ ಧ್ವಜದಿಂದ ಸೈನ್ಯದಲ್ಲಿ ಯಾರಿಗೂ ನಮಸ್ಕರಿಸಬಾರದು.

೧೪. ರಾಷ್ಟ್ರಧ್ವಜವನ್ನು ಹಾರಿಸುವಾಗ ರಾಷ್ಟ್ರಗೀತೆಯನು ಹಾಡಬೇಕು. ಈ ಸಮಯದಲ್ಲಿ ಗೌರವದಿಂದ ಸಾವಧಾನವಾಗಿ ನಿಲ್ಲಬೇಕು.

"ನನ್ನ ರಾಷ್ಟ್ರಧ್ವಜಕ್ಕೆ ಮತ್ತು ಅದು ಪ್ರತಿನಿಧಿಸುವ ಸಾರ್ವಭೌಮ ಪ್ರಜಾಪ್ರಭುತ್ವ ಗಣರಾಜ್ಯಕ್ಕೆ ನಿಷ್ಠವಾಗಿರುತ್ತೇನೆಂದು ನಾನು ಪ್ರತಿಜ್ಞೆ ಮಾಡುತ್ತೇನೆ"

- ಇದು ನಮ್ಮ ರಾಷ್ಟ್ರಧ್ವಜ ಹಾರಿಸುವಾಗ ಶಾಲೆಗಳಲ್ಲಿ ವಿದ್ಯಾರ್ಥಿಗಳು ಸ್ವೀಕರಿಸುವ ಪ್ರತಿಜ್ಞೆ

ಸತ್ಯಮೇವ ಜಯತೇ

ಪ್ರತಿಯೊಂದು ಸರ್ಕಾರಕ್ಕೂ ತನ್ನದೇ ಆದ ಚಿಹ್ನೆ, ಮುದ್ರೆ ಇರುತ್ತದೆ. ಪ್ರತಿಯೊಂದು ರಾಷ್ಟ್ರವ್ಯವಹಾರದಲ್ಲಿಯೂ ಈ ಮುದ್ರೆಯನ್ನು ಬಳಸುವರು. ನಮ್ಮ ಕೇಂದ್ರ ಸರ್ಕಾರಕ್ಕೂ ತನ್ನದೇ ಆದ ಚಿಹ್ನೆ ಇದೆ. ಅದನ್ನು ರಾಜಚಿಹ್ನೆ ಅಥವಾ ಅಶೋಕ ಚಿಹ್ನೆ ಎಂದು ಕರೆಯಲಾಗುತ್ತದೆ.

ಸ್ವಾತಂತ್ರ್ಯದ ನಂತರ, ಸಾರನಾಥದಲ್ಲಿ ದೊರೆತ ಅಶೋಕಸ್ತಂಭದ ಮೇಲೆ ಕೆತ್ತಿರುವ ಒಂದೇ ದೇಹದ ನಾಲ್ಕು ಸಿಂಹಗಳ ಚಿತ್ರವನ್ನು ರಾಜಚಿಹ್ನೆಯಾಗಿ ಸ್ವೀಕರಿಸಲಾಗಿದೆ. ಚಿತ್ರದಲ್ಲಿ ಕೇವಲ ಮೂರು ಸಿಂಹಗಳು ಕಾಣಿಸುತ್ತವೆ. ಸಿಂಹಗಳ ಕೆಳಗೆ ಓಡುತ್ತಿರುವ ಕುದುರೆ, ನಡುವೆ ಇಪ್ಪತ್ನಾಲ್ಕು ತೆಳುವಾದ ಕಡ್ಡಿಗಳ ಒಂದು ಚಕ್ರವಿದೆ. ಬಲಗಡೆ ಒಂದು ಗೂಳಿಯಿದೆ.

ಈ ಚಿತ್ರದ ಮುದ್ರೆ ನಮ್ಮ ರಾಷ್ಟ್ರಧ್ವಜದಲ್ಲಿಯೂ ಇದೆ. ತ್ರಿಮೂರ್ತಿಯ ಈ ಪಟ್ಟಿಯ ಕೆಳಗೆ ಉಪನಿಷತ್ತಿನ 'ಸತ್ಯಮೇವ ಜಯತೇ' ಎಂದು ದೇವನಾಗರಿ ಲಿಪಿಯಲ್ಲಿ ಬರೆಯಲಾಗಿದೆ. ಈ ವಾಕ್ಯ ನಮ್ಮ ರಾಷ್ಟ್ರದ ಘೋಷಣೆ. ನಮ್ಮ ದೇಶದ ನ್ಯಾಯಾಲಯಗಳಲ್ಲಿಯೂ ಈ ವಾಕ್ಯವನ್ನು ಬಳಸುತ್ತಾರೆ. ಈ ಚಿಹ್ನೆ ಮತ್ತು ವಾಕ್ಯವನ್ನು ಸಾವಿರದ ಒಂಬೈನೂರಾ ಐವತ್ತಾರರ ಜನವರಿ ಇಪ್ಪತ್ತಾರರಂದು ರಾಜಚಿಹ್ನೆಯಾಗಿ ಸ್ವೀಕರಿಸಲಾಯಿತು.

ಇದರ ಪ್ರಯೋಗ ಕೇಂದ್ರ ಸರ್ಕಾರದ ಕಾರ್ಯಗಳಿಗೋಸ್ಕರ ಮಾತ್ರ. ಭಾರತ ಸರ್ಕಾರದ ಕೇಂದ್ರ ಮಂತ್ರಿಗಳು, ರಾಜ್ಯಪಾಲ, ವಿದೇಶಗಳ ರಾಯಭಾರಿಗಳು ಮತ್ತು ಅವರ ವಿಭಾಗದವರು ಈ ಚಿಹ್ನೆಯನ್ನು ಬಳಸುವ ಅಧಿಕಾರವಿದೆ. ಸರ್ಕಾರೀ

ಕಾರ್ಯಾಲಯಗಳಲ್ಲಿ ಕೆಂಪುಬಣ್ಣದ ಚಿಹ್ನೆ, ಕೇಂದ್ರ ಸರ್ಕಾರ ನೀಲಿಬಣ್ಣದ ಚಿಹ್ನೆಯನ್ನು ಬಳಸುವರು. ಲೋಕಸಭಾ ಸದಸ್ಯರು ಹಸಿರುಬಣ್ಣದ ಚಿಹ್ನೆಯನ್ನೂ, ರಾಜ್ಯಸಭಾ ಸದಸ್ಯರು ಕೆಂಪುಬಣ್ಣದಲ್ಲಿ ಈ ಚಿಹ್ನೆಯನ್ನು ಬಳಸುವರು.

ಈ ಚಿಹ್ನೆಯಲ್ಲಿರುವ ಸಿಂಹಗಳು ಸಮಾನತೆ, ಏಕತೆ, ಜಾಗೃತಿ ಮತ್ತು ಶಕ್ತಿಯ ಪ್ರತೀಕಗಳಾಗಿವೆ. ನಾಲ್ಕೂ ಒಂದೇ ಚೌಕಟ್ಟಿನಲ್ಲಿ ಕುಳಿತಿವೆ. ಮಧ್ಯದ ಚಕ್ರ ಬೆಳಕು, ಶಾಂತಿ ಮತ್ತು ಸತ್ಯ ಸ್ಥಾಪನೆಗೋಸ್ಕರ ಇದೆ. ಚಕ್ರದ ಇಪ್ಪತ್ನಾಲ್ಕು ಕಡ್ಡಿಗಳು ನಮ್ಮನ್ನು ಯಾವಾಗಲೂ ಪ್ರಗತಿಯ ಕಡೆ ಗಮನ ಕೊಡಲು ಪ್ರೇರಣೆ ನೀಡುತ್ತವೆ. ಇಪ್ಪತ್ನಾಲ್ಕು ಗಂಟೆಗಳೂ ಸೇವೆಯಲ್ಲಿ ನಿರತವಾಗಿರಲು ಪ್ರೇರೇಪಿಸುತ್ತದೆ. ನಮ್ಮ ರಾಜಚಿಹ್ನೆ ನಮ್ಮ ಸಂಸ್ಕೃತಿಯ ಪ್ರತೀಕ. ಇದನ್ನು ಗೌರವಿಸುವುದು ನಮ್ಮ ಕರ್ತವ್ಯ.

ನಮ್ಮ ರಾಷ್ಟ್ರಗೀತೆ

ಜನಗಣಮನ ಅಧಿನಾಯಕ ಜಯಹೇ
ಭಾರತಭಾಗ್ಯವಿಧಾತ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗಾ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣಮಂಗಲದಾಯಕ ಜಯಹೇ

ಭಾರತ ಭಾಗ್ಯವಿಧಾತ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

'ಜನಗಣಮನ' ನಮ್ಮ ರಾಷ್ಟ್ರಗೀತೆ. ಇದು ರಾಷ್ಟ್ರದ ಜಯಗೀತೆ. ಇದನ್ನು ಗುರುದೇವ ರವೀಂದ್ರನಾಥ ಠಾಕೂರರು ಬರೆದಿದ್ದಾರೆ. ಸಾವಿರದ ಒಂಬೈನೂರಾ ಹನ್ನೊಂದರಲ್ಲಿ ಬಂಗಾಳಿಯಲ್ಲಿ ರಚಿಸಿದ ಈ ಗೀತೆಯ ಮೊದಲ ಪದ್ಯದ ಸಾಲುಗಳನ್ನು ಮಾತ್ರ ಆರಿಸಿಕೊಂಡು ನಮ್ಮ ರಾಷ್ಟ್ರಗೀತೆಯನ್ನು ರೂಪಿಸಿದ್ದಾರೆ. ಈ ಕವನದ ಮೊದಲಿನ ಸಾಲು 'ಜನಗಣಮನ ಅಧಿನಾಯಕ ಜಯಹೇ.' ಗೀತೆಯ ಮೊದಲ ಪದಗಳಿಂದ ಇದನ್ನು 'ಜನಗಣಮನ' ಎಂದು ಸಂಕ್ಷಿಪ್ತವಾಗಿ ಕರೆಯುವುದು ವಾಡಿಕೆ. ಮೊದಲನೆಯ ಪದ್ಯದ ಸಾಲುಗಳ ಅನಂತರ 'ಜಯಹೇ ಜಯಹೇ' ಎಂದು ಜಯಕಾರದ ಸಾಲು ಸೇರಿದ ಭಾಗವೇ ನಮ್ಮ ಅಧಿಕೃತ ರಾಷ್ಟ್ರಗೀತೆ.

ಈ ಗೀತೆಯನ್ನು ದೇಶದಾದ್ಯಂತ ಹಾಡಲಾಗುತ್ತದೆ. ನಮ್ಮ ಸೈನ್ಯ ಅಥವಾ ಪೊಲೀಸ್ ಇದನ್ನು ಹಾಡಿನ ಧಾಟಿಯಲ್ಲಿ ತಮ್ಮ ಬ್ಯಾಂಡಿನಲ್ಲೂ ಬಾರಿಸುತ್ತಾರೆ. ರಾಷ್ಟ್ರಗೀತೆಯನ್ನು ಹಾಡುವ ಸಂದರ್ಭದಲ್ಲಿ ಜನರು ಸಾವಧಾನವಾಗಿ, ನೇರವಾಗಿ ನಿಂತು ಹಾಡುತ್ತಾರೆ. ಇಪ್ಪತ್ತಾರು ಡಿಸೆಂಬರ್ ಸಾವಿರದ ಒಂಬೈನೂರಾ ಹನ್ನೆರಡರಲ್ಲಿ ಇದನ್ನು ಮೊಟ್ಟಮೊದಲು ಕಲ್ಕತ್ತಾದ ಕಾಂಗ್ರೆಸ್ ಅಧಿವೇಶನದಲ್ಲಿ ಹಾಡಲಾಯಿತು. ಇದರ ಅಧ್ಯಕ್ಷತೆಯನ್ನು ಶ್ರೀಸುರೇಂದ್ರನಾಥ ಬ್ಯಾನರ್ಜಿಯವರು ವಹಿಸಿದ್ದರು.

ಇಪ್ಪತ್ನಾಲ್ಕು ಜನವರಿ, ಸಾವಿರದ ಒಂಬೈನೂರಾ ಐವತ್ತರಲ್ಲಿ ಭಾರತೀಯ ಸಂವಿಧಾನ 'ಜನಗಣಮನ'ವನ್ನು ಅಧಿಕೃತ ರಾಷ್ಟ್ರಗೀತೆಯೆಂದು ಅಂಗೀಕರಿಸಿತು. ಶುಭ ಸಂದರ್ಭಗಳಲ್ಲಿ ಕೇಂದ್ರ ಅಥವಾ ರಾಜ್ಯ ಸರ್ಕಾರದ ಮಂತ್ರಿ, ರಾಷ್ಟ್ರಪತಿ, ರಾಜ್ಯಪಾಲರು ರಾಷ್ಟ್ರಧ್ವಜಕ್ಕೆ ವಂದಿಸುವರು. ರಾಷ್ಟ್ರಗೀತೆಯ ಧಾಟಿಯ ಸಮಯ ಐವತ್ತೆರಡು

ಸೆಕೆಂಡುಗಳು. ಯಾವುದೇ ಸಂದರ್ಭದಲ್ಲೂ ಒಂದು ನಿಮಿಷಕ್ಕಿಂತ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳಬಾರದು.

ಇದು ಭಾರತ ಇಬ್ಭಾಗವಾಗುವುದಕ್ಕೆ ಮೊದಲು ಬರೆದ ಗೀತೆಯಾದರೂ ಇದರಲ್ಲಿ ಬರುವ ರಾಷ್ಟ್ರದ ವಿವಿಧ ಪ್ರದೇಶಗಳ ಹೆಸರುಗಳನ್ನು ಬದಲಾಯಿಸಿಲ್ಲ. ಆ ಹೆಸರುಗಳು ವಿವಿಧ ಭಾರತೀಯ ಜನಾಂಗಗಳಿಗೂ ಅನ್ವಯಿಸುತ್ತದೆ. ಆದ್ದರಿಂದ ಮೂಲಗೀತೆ ಯಾವುದೇ ಬದಲಾವಣೆಗಳನ್ನು ಹೊಂದದೆ ಉಳಿದಿದೆ. ಈ ಗೀತೆ ಸರ್ವಶಕ್ತಿ, ಸರ್ವವ್ಯಾಪಿ ಮಾನವನ ಹೃದಯದ ಅಧಿನಾಯಕನಾದ ಈಶ್ವರನ ಜಯ ಘೋಷಣೆಯಿಂದ ಆರಂಭವಾಗುತ್ತದೆ. ನಂತರದ ಸಾಲಿನಲ್ಲಿ ಎಲ್ಲಾ ಪ್ರಾಂತ್ಯಗಳು, ನದಿಗಳು, ಪರ್ವತಗಳ ಹೆಸರುಗಳಿವೆ.

ರಾಷ್ಟ್ರಗೀತೆಗೆ ಸೂಕ್ತ ಗೌರವ ಕೊಡದೆ ಇರುವುದು, ರಾಷ್ಟ್ರಗೀತೆಯನ್ನು ಹಾಡುವುದಕ್ಕೆ ಅಡ್ಡಿ ತರುವುದು ಶಾಸನದ ಪ್ರಕಾರ ಶಿಕ್ಷಾರ್ಹ ಅಪರಾಧ. ಸಂವಿಧಾನದಲ್ಲಿ ರಾಷ್ಟ್ರಗೀತೆಯ ಸಮಾನ ಸ್ಥಾನ ಪಡೆದಿರುವ 'ವಂದೇ ಮಾತರಂ' ರಾಷ್ಟ್ರಸ್ತವ ಎನಿಸಿದೆ. ಸಮಾರಂಭಗಳಲ್ಲಿ 'ವಂದೇ ಮಾತರಂ' ಗೀತೆಯನ್ನು ಪ್ರಾರ್ಥನೆಯಾಗಿಯೂ 'ಜನಗಣಮನ' ಗೀತೆಯನ್ನು ಮಂಗಳಗೀತೆಯಾಗಿಯೂ ಹಾಡಲಾಗುತ್ತದೆ.

ನಮ್ಮ ರಾಷ್ಟ್ರಪ್ರಾಣಿ - ಹುಲಿ

ಹುಲಿ ನಮ್ಮ ದೇಶದ ರಾಷ್ಟ್ರಪ್ರಾಣಿ. ಅದರ ಬಲಿಷ್ಠ ಶರೀರ, ತೇಜಸ್ಸು ಅದರ ರಾಜನಡಿಗೆ, ಘರ್ಜನೆ ರಾಷ್ಟ್ರದ ಪೌರುಷದ ಪ್ರತೀಕವಾಗಿದೆ. ಸಾವಿರದ ಒಂಬೈನೂರಾ ಎಪ್ಪತ್ತೆರಡು ಜುಲೈ ಒಂಬತ್ತರಂದು ಹುಲಿಯನ್ನು ರಾಷ್ಟ್ರಪ್ರಾಣಿಯೆಂದು ಘೋಷಿಸಲಾಯಿತು. ಅದಕ್ಕೆ ಮೊದಲು ಸಾವಿರದ ಒಂಬೈನೂರಾ ಅರವತ್ತೊಂಬತ್ತರಲ್ಲಿ ಸಿಂಹ ರಾಷ್ಟ್ರಪ್ರಾಣಿಯೆಂದು ಅಂಗೀಕೃತವಾಗಿತ್ತು.



ರಾಷ್ಟ್ರಪ್ರಾಣಿ ಹುಲಿ

ಹಳದಿಯ ಮೇಲೆ ಕಪ್ಪು ಪಟ್ಟೆಯುಳ್ಳ ಹುಲಿ ನೋಡಲು ಬಲು ಆಕರ್ಷಕವಾದ ಪ್ರಾಣಿ. ಪುಷ್ಟವಾಗಿ ಬೆಳೆದ ಗಂಡುಹುಲಿ ಸುಮಾರು ಎರಡು ಮೀಟರ್ ಉದ್ದವಿರುತ್ತದೆ. ಎತ್ತರ ಒಂದು ಮೀಟರ್.

ಭಾರತದಲ್ಲಿ ಈಗ ಸುಮಾರು ಎರಡು ಸಾವಿರದ ಐದುನೂರು ಹುಲಿಗಳಿವೆ. ವಿವೇಚನೆಯಿಲ್ಲದೆ ಹುಲಿಗಳನ್ನು ಕೊಲ್ಲುವುದು, ಕಾಡುಗಳನ್ನು ಕತ್ತರಿಸಿ ಅವುಗಳ ವಾಸಸ್ಥಾನವನ್ನು ಹಾಳು ಮಾಡುವುದರಿಂದ ಹುಲಿಗಳ ಸಂಖ್ಯೆ ಕಡಿಮೆಯಾಗಿದೆ. ದೇಶದ ಕೆಲವು ಪ್ರದೇಶಗಳಲ್ಲಿ, ಸುರಕ್ಷಿತ ವನಗಳಲ್ಲಿ ಹುಲಿಗಳನ್ನು ರಕ್ಷಿಸಿ ಅದರ ಸಂತಾನವನ್ನು ಬೆಳೆಸಲು ಯೋಜನೆಗಳನ್ನು ರೂಪಿಸಲಾಗಿದೆ. ಪ್ರಕೃತಿಯ ಅತ್ಯಂತ ಸುಂದರ ವನ್ಯಪ್ರಾಣಿಗಳಲ್ಲಿ ಒಂದಾದ ಹುಲಿಯನ್ನು ಬೇಟೆಯಾಡುವುದು ಅಪರಾಧವೆಂದು ಘೋಷಿಸಲಾಗಿದೆ.

ನಮ್ಮ ರಾಷ್ಟ್ರೀಯ ಪಕ್ಷಿ - ನವಿಲು

ನಮ್ಮ ದೇಶದಲ್ಲಿ ನವಿಲು ವಿಶೇಷ ಮಹತ್ವವನ್ನು ಪಡೆದ ಪಕ್ಷಿ. ಬೀಸಣಿಗೆಯಂತೆ ತನ್ನ ಗರಿಗಳನ್ನು ಕೆದರಿಸಿ ಕುಣಿಯುತ್ತಿರುವ ನವಿಲು ಬಹಳ ಆಕರ್ಷಕವಾಗಿರುತ್ತದೆ. ನವಿಲು ಎಲ್ಲ ಪಕ್ಷಿಗಳಿಗಿಂತ ಸುಂದರವಾದುದು. ನವಿಲು ಸುಮಾರು ನಾಲ್ಕು ಅಡಿ ಉದ್ದವಿರುತ್ತದೆ. ಗಂಡು ನವಿಲು ಹೆಣ್ಣು ನವಿಲಿಗಿಂತ ಸುಂದರವಾಗಿರುತ್ತದೆ. ನವಿಲಿನ ಕತ್ತಿನ ಮೇಲೆ ಕಿರೀಟವಿರುತ್ತದೆ. ಇದರಿಂದ ಅದು ಮತ್ತಷ್ಟು ಸುಂದರವಾಗಿ ಕಾಣುತ್ತದೆ. ಇದರ ಬಾಲದ ಮೇಲೆ ಹಸಿರು ನೀಲಿಬಣ್ಣದ ಕಣ್ಣಿನ ಆಕೃತಿಗಳಿರುತ್ತವೆ. ಇವುಗಳನ್ನು ಚಂದ್ರಿಕೆ ಎಂದು ಕರೆಯುತ್ತಾರೆ. ನವಿಲು ಮಳೆ ಸುರಿಸುವ ಮೋಡಗಳನ್ನು ನೋಡಿ ಬಾಗಿ ಬಾಗಿ ಕುಣಿಯುತ್ತದೆ. ನವಿಲಿನ ಬಾಲ ಮತ್ತು ರೆಕ್ಕೆ ಕಾಡಿನ ಬಣ್ಣದ್ದಾಗಿರುತ್ತದೆ.

ಹುಲ್ಲು ಕಡ್ಡಿಗಳ ಗೂಡನ್ನು ಕಟ್ಟಿಕೊಂಡು ಈ ಪಕ್ಷಿ ನೆಲದ ಮೇಲೆ ವಾಸಿಸುತ್ತದೆ. ಭಾರವಾದ ಪಕ್ಷಿಯಾದ್ದರಿಂದ ಇದಕ್ಕೆ ಹೆಚ್ಚು ಹಾರಲು ಸಾಧ್ಯವಿಲ್ಲ. ವಾಲ್ಮೀಕಿಯ ರಾಮಾಯಣದಲ್ಲಿ ನವಿಲಿನ ವರ್ಣನೆ ಇದೆ. ರಾಜ ಮೇಘಧ್ವಜನ




ರಾಷ್ಟ್ರಪಕ್ಷಿ ನವಿಲು

ರಾಜಚಿಹ್ನೆಯು ನವಿಲೇ ಆಗಿತ್ತು. ಸ್ಕಂದಗುಪ್ತನ ಕಾಲದ ವೀರಪದಕದ ಮೇಲೆ ನವಿಲಿನ ಚಿತ್ರವಿದ್ದಿತು. ಸ್ಕಂದಗುಪ್ತನ ರಜತ ಮುದ್ರೆಯ ಮೇಲೆ ಕುಣಿಯುತ್ತಿರುವ ನವಿಲನ್ನು ಕೆತ್ತಲಾಗಿದೆ. ಮೊಗಲರ ಸಾಮ್ರಾಟ ಷಹಜಹಾನ್‌ನ ರತ್ನ ಸಿಂಹಾಸನವು

ಮಯೂರ ಸಿಂಹಾಸನವೆಂದು ಪ್ರಸಿದ್ಧಿ ಪಡೆದಿತ್ತು. ಇಂಥ ಮನೋಹರವಾದ ನವಿಲನ್ನು ನಮ್ಮ ರಾಷ್ಟ್ರವು 'ರಾಷ್ಟ್ರಪಕ್ಷಿ'ಯೆಂದು ಅಂಗೀಕರಿಸಿದೆ. ಇದರ ಬಣ್ಣ ಬಣ್ಣದ ಗರಿಗಳು ನಮ್ಮ 'ವಿವಿಧತೆಯಲ್ಲಿ ಏಕತೆ'ಯ ಪ್ರತೀಕವಾಗಿವೆ.

ನಮ್ಮ ರಾಷ್ಟ್ರೀಯ ಪುಷ್ಪ - ಕಮಲ



ರಾಷ್ಟ್ರ ಪುಷ್ಪ ಕಮಲ

ನಮ್ಮ ದೇಶದಲ್ಲಿ ಕಮಲವು ಸೌಭಾಗ್ಯದ ಪ್ರತೀಕವಾಗಿದೆ. ಪೌರಾಣಿಕ ಕಥೆಯಲ್ಲಿ ಮಹಾಪ್ರಳಯದ ನಂತರ ಭಗವಂತ ವಿಷ್ಣುವಿನ ಹೊಕ್ಕಳಿಂದ ಕಮಲವು ಹುಟ್ಟಿತು. ಕಮಲದಲ್ಲಿ ಬ್ರಹ್ಮ ಹುಟ್ಟಿದ. ಬ್ರಹ್ಮನು ಸೃಷ್ಟಿಕರ್ತ ಎಂದು ಇದೆ. ವಿಶೇಷವಾಗಿ ನಿಂತ ನೀರಿನಲ್ಲಿ ಬಗೆ ಬಗೆಯ ಬಣ್ಣದ ಕಮಲಗಳಿರುತ್ತವೆ. ಬಿಳಿ, ಗುಲಾಬಿ, ನೀಲಿ ಮತ್ತು ಕೆಂಪು ಕಮಲಗಳಿರುತ್ತದೆ. ಕೆಂಪು ಕಮಲವು ಬಹಳ ಸುಂದರವಾಗಿರುತ್ತದೆ. ಸಾವಿರದ ಎಂಟುನೂರಾ ಐವತ್ತೇಳರಲ್ಲಿ ಕಮಲದ ಹೂ ಕ್ರಾಂತಿಯ ಪ್ರತೀಕವಾಯಿತು. ಭಾರತದ ಮೊದಲ ರಾಷ್ಟ್ರಧ್ವಜದಲ್ಲಿ ಕಮಲದ ಹೂವಿನ ಚಿತ್ರವಿತ್ತು. ಕವಿಗಳು ಕಮಲವನ್ನು ತಮ್ಮ ಕವಿತೆಗಳಲ್ಲಿ ಸುಂದರವಾಗಿ ವರ್ಣಿಸಿದ್ದಾರೆ. ಸರಸ್ವತಿಯ ಆಸನ ಕಮಲದ ಹೂ. ಆಯುರ್ವೇದದ ದೃಷ್ಟಿಯಿಂದ ಕಮಲದ ಹೂ, ಎಲೆಗಳು ಹೆಚ್ಚು ಉಪಯುಕ್ತವಾದುವು. ಭಾರತ ಸರ್ಕಾರವು ಇಂಥ ಕಮಲದ ಹೂವನ್ನು ರಾಷ್ಟ್ರೀಯಪುಷ್ಪ ಎಂದು ಘೋಷಿಸಿದೆ. ಬೇರೆ ರಾಷ್ಟ್ರೀಯ ಸಂಕೇತಗಳ ಜೊತೆ ನಾವು ರಾಷ್ಟ್ರೀಯಪುಷ್ಪ ಕಮಲವನ್ನೂ ಗೌರವಿಸಬೇಕು.

ನಮ್ಮ ರಾಷ್ಟ್ರೀಯ ಹಬ್ಬಗಳು

ಹಬ್ಬಗಳು ನಮಗೆ ಆನಂದ, ಉತ್ಸಾಹ ಮತ್ತು ಉಲ್ಲಾಸವನ್ನು ನೀಡುತ್ತವೆ. ಕೆಲವು ಹಬ್ಬಗಳನ್ನು ಧಾರ್ಮಿಕ ನಂಬಿಕೆಗಳ ಮೂಲಕ ಆಚರಿಸುತ್ತೇವೆ. ಕೆಲವು ಹಬ್ಬಗಳು ಯಾವುದಾದರೂ ರಾಷ್ಟ್ರೀಯ ಘಟನೆಯಿಂದ ಕೂಡಿರುತ್ತವೆ. ಈ ಹಬ್ಬಗಳನ್ನು ದೇಶದ ಎಲ್ಲರೂ ಉತ್ಸಾಹದಿಂದ ಆಚರಿಸುತ್ತಾರೆ. ಅಂತಹ ಕೆಲವು ಹಬ್ಬಗಳನ್ನು ಕುರಿತು ಮುಂದೆ ಹೇಳಲಾಗಿದೆ.

ಸ್ವಾತಂತ್ರ್ಯ ದಿನಾಚರಣೆ

ಸಾವಿರದ ಒಂಬೈನೂರಾ ನಲವತ್ತೇಳು ಆಗಸ್ಟ್ ಹದಿನೈದರಂದು ನಮ್ಮ ದೇಶ ಸ್ವತಂತ್ರವಾಯಿತು. ಕೋಟಿ ಕೋಟಿ ಜನ ತಮ್ಮ ಪ್ರಾಣವನ್ನು ತೆತ್ತು

ನಮಗೆ ಸ್ವಾತಂತ್ರ್ಯವನ್ನು ತಂದುಕೊಟ್ಟರು. ಆ ಶುಭದಿನದ ನೆನಪಿಗಾಗಿ ಆಗಸ್ಟ್ ಹದಿನೈದರಂದು ಪ್ರತಿ ವರ್ಷ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸುತ್ತೇವೆ. ಭಾರತದ ಪ್ರಥಮ ಪ್ರಧಾನಮಂತ್ರಿ ಪಂಡಿತ ಜವಹರಲಾಲ್ ನೆಹರೂ ಅವರು ಆಗಸ್ಟ್ ಹದಿನೈದು, ಸಾವಿರದ ಒಂಬೈನೂರಾ ನಲವತ್ತೇಳರಂದು ದೆಹಲಿಯ ಕೆಂಪುಕೋಟೆಯ ಮೇಲೆ ರಾಷ್ಟ್ರಧ್ವಜವನ್ನು ಹಾರಿಸಿದರು. ಇಡೀ ದೇಶದಲ್ಲೆಲ್ಲಾ ಅಂದು ಸಂತೋಷದ ಅಲೆ ಹರಿದಾಡಿತು. ಮಿಠಾಯಿಗಳನ್ನು ಹಂಚಲಾಯಿತು. ಒಂದೇ ಕಂಠದಿಂದ 'ಭಾರತ ಮಾತೆಗೆ ಜಯವಾಗಲಿ' ಎಂಬ ಘೋಷಣೆ ಕೇಳಿಸಿತು.

ಆಗಸ್ಟ್ ಹದಿನೈದು ನಮ್ಮ ದೇಶದ ಮಹತ್ವದ ದಿನ. ಅಂದು ನಮ್ಮ ರಾಷ್ಟ್ರದಲ್ಲಿ ಸ್ವಾತಂತ್ರ್ಯ ದಿನಾಚರಣೆ ನಡೆಯುತ್ತದೆ. ದೆಹಲಿಯ ಕೆಂಪುಕೋಟೆಯಲ್ಲಿ ವಿಶೇಷ ಸಮಾರಂಭ ಏರ್ಪಡುತ್ತದೆ. ಆ ದಿನ ಕೆಂಪುಕೋಟೆಯ ಮೇಲೆ ಪ್ರಧಾನಮಂತ್ರಿಗಳು ರಾಷ್ಟ್ರಧ್ವಜವನ್ನು ಹಾರಿಸಿ, ರಾಷ್ಟ್ರವನ್ನು ಉದ್ದೇಶಿಸಿ ಮಾತನಾಡುತ್ತಾರೆ. ಶಾಲಾ ಕಾಲೇಜುಗಳಲ್ಲಿ, ಸರ್ಕಾರಿ ಕಾರ್ಯಾಲಯಗಳಲ್ಲಿ ರಾಷ್ಟ್ರಧ್ವಜವನ್ನು ಗೌರವದಿಂದ ಹಾರಿಸುತ್ತಾರೆ. ರಾಷ್ಟ್ರಗೀತೆಯನ್ನು ಹಾಡುತ್ತಾರೆ. ಕ್ರೀಡಾಪಂದ್ಯಗಳು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆ ದಿನ ನಡೆಸುತ್ತಾರೆ.

ಗಣರಾಜ್ಯೋತ್ಸವ

ಭಾರತದಲ್ಲಿ ಪ್ರಜಾಪ್ರಭುತ್ವ ಗಣರಾಜ್ಯ ಸ್ಥಾಪನೆಗಾಗಿ ಶ್ರಮಿಸಬೇಕೆಂದು ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ಸಾವಿರದ ಒಂಬೈನೂರಾ ಇಪ್ಪತ್ತೊಂಬತ್ತರ ಜನವರಿ ಇಪ್ಪತಾರರಂದು ಪ್ರತಿಜ್ಞೆ ಮಾಡಿತು. ಈ ಪ್ರತಿಜ್ಞೆ ನೆರವೇರಿದ್ದು ಸಾವಿರದ ಒಂಬೈನೂರಾ ಐವತ್ತು ಜನವರಿ ಇಪ್ಪತ್ತಾರರಂದು.

ಅಂದು ಗಣರಾಜ್ಯ ಸಂವಿಧಾನ ಜಾರಿಗೆ ಬಂದಿತು. ಅದರ ನೆನಪಿಗಾಗಿ ಪ್ರತಿ ವರ್ಷ ಜನವರಿ ಇಪ್ಪತ್ತಾರರಂದು ಭಾರತ ದೇಶದಾದ್ಯಂತ ಗಣರಾಜ್ಯೋತ್ಸವ ಎಂದು ಆಚರಿಸುತ್ತಾರೆ.



ಗಣರಾಜ್ಯೋತ್ಸವ

ರಾಷ್ಟ್ರದ ರಾಜಧಾನಿಯಾದ ದೆಹಲಿಯಲ್ಲಿ ನಡೆಯುವ ಗಣರಾಜ್ಯ ದಿನಾಚರಣೆಯ ಮೆರವಣಿಗೆ ಭವ್ಯ ಹಾಗೂ ಪ್ರೇಕ್ಷಣೀಯ. ಮೆರವಣಿಗೆಯನ್ನು ನೋಡಲು ಲಕ್ಷಾಂತರ ಮಂದಿ ರಾಜಪಥದ ಎರಡೂ ಕಡೆ ಸೇರಿರುತ್ತಾರೆ.


ರಾಷ್ಟ್ರಪತಿಯವರು ತಮ್ಮ ಭವನದಿಂದ ಹೊರಟಾಗ ಮೆರವಣಿಗೆ ಆರಂಭವಾಗುತ್ತದೆ. ರಾಷ್ಟ್ರಪತಿಯವರು ವೇದಿಕೆಯನ್ನೇರಿದ ಮೇಲೆ ಮೆರವಣಿಗೆಯ ಸಾಲು ಹರಿಯುತ್ತದೆ. ರಾಷ್ಟ್ರಪತಿಯವರು ಮೆರವಣಿಗೆಯಲ್ಲಿ ಸಾಗುವ ರಕ್ಷಣಾ ಪಡೆಗಳಿಂದ, ಎನ್.ಸಿ.ಸಿ. ದಳದಿಂದ ಗೌರವ ವಂದನೆ ಸ್ವೀಕರಿಸುತ್ತಾರೆ. ಈ ಒಂದೊಂದು ಪಡೆಯವರೂ ಸೈನಿಕ ಸಂಗೀತದ ಬ್ಯಾಂಡ್‌ಗಳವರ ಹಿಂಬದಿಯಲ್ಲಿ ಶಿಸ್ತಿನಿಂದ ನಡೆಯುತ್ತಾರೆ.

ಅನಂತರ, ವಿಮಾನ ನಿರೋಧಕ ಫಿರಂಗಿಗಳನ್ನು ಹೊತ್ತ ವಾಹನಗಳು, ಆನೆಯ ಸಾಲುಗಳು, ಹೋಗುತ್ತವೆ. ನಂತರ ಸಾಂಸ್ಕೃತಿಕ ಮೆರವಣಿಗೆ, ಪುರಾತನ-ಆಧುನಿಕ ಭಾರತದ ಇತಿಹಾಸ ಪ್ರಸಿದ್ಧ ಸನ್ನಿವೇಶಗಳನ್ನು ನಿರೂಪಿಸುವ ದೊಡ್ಡ ದೊಡ್ಡ ಮೂಕ ದೃಶ್ಯಗಳು ಇರುತ್ತವೆ. ರಾಷ್ಟ್ರದ ಬೇರೆ ಬೇರೆ ರಾಜ್ಯಗಳ ಸ್ವಾತಂತ್ರ್ಯೋತ್ತರ ಸಾಧನೆಗಳ ಸ್ತಬ್ಧ ಚಿತ್ರಗಳ ವಾಹನಗಳು ನಡೆಯುತ್ತವೆ.

ನಂತರ ಬಾಲಕ ಬಾಲಿಕೆಯರು ಸಮವಸ್ತ್ರಧಾರಿಗಳಾಗಿ ಶಿಸ್ತಿನಿಂದ ಬರುತ್ತಾರೆ. ಇದು ಮುಗಿಯುತ್ತಿದ್ದಂತೆ ವಿಮಾನಗಳು ವಿಶಿಷ್ಟ ವಿನ್ಯಾಸಗಳಲ್ಲಿ ಸಾಲುಗಟ್ಟಿ ಹಾರುತ್ತವೆ. ಬಣ್ಣಬಣ್ಣದ ಹೊಗೆಯನ್ನು ಬಿಡುತ್ತ ಆಕಾಶದಲ್ಲಿ ರಾಷ್ಟ್ರಧ್ವಜದ ಮೂರು ಬಣ್ಣಗಳ ಹೊಗೆಯನ್ನು ಬಿಡುತ್ತ ಆಕಾಶದಲ್ಲಿ ರಾಷ್ಟ್ರಧ್ವಜದ ಮೂರು ಬಣ್ಣಗಳ ಪಟ್ಟಿಗಳನ್ನು ರಚಿಸುತ್ತವೆ. ರಾಷ್ಟ್ರೀಯ ಕ್ರೀಡಾಂಗಣದಲ್ಲಿ ರಾಷ್ಟ್ರದ ವಿವಿಧ ಭಾಗಗಳವರ ಜನಪದ ನೃತ್ಯಗಳ ಪ್ರದರ್ಶನ ನಡೆಯುತ್ತದೆ. ಈ ದೃಶ್ಯಗಳನ್ನು ನೋಡಲು ವಿದೇಶೀ ಅತಿಥಿಗಳೂ ಬಂದಿರುತ್ತಾರೆ.

ರಾಜ್ಯಗಳ ರಾಜಧಾನಿಗಳಲ್ಲಿ ಕೂಡ ಮೆರವಣಿಗೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಅಂದು ನಡೆಯುತ್ತವೆ. ಈ ಹಬ್ಬವು ನಮ್ಮ ಸಂವಿಧಾನದ ಮೇಲಿನ ಶ್ರದ್ಧೆಯನ್ನು ಮೂಡಿಸುವ ಹಬ್ಬವಾಗಿದೆ.

ಗಾಂಧೀ ಜಯಂತಿ



ಮಹಾತ್ಮಾಗಾಂಧಿ

ಭಾರತದ ಸ್ವಾತಂತ್ರ್ಯ ಹೋರಾಟದ ನಾಯಕ ಮಹಾತ್ಮಗಾಂಧಿ ಅಹಿಂಸೆಯ ಕ್ರಾಂತಿಯಿಂದ ಬ್ರಿಟಿಷರ ಚಕ್ರಾಧಿಪತ್ಯವನ್ನು ಭಾರತದಲ್ಲಿ ಕೊನೆಗೊಳಿಸಿದ

ಕಾರಣಪುರುಷ. ಇವರು ಸತ್ಯ ಮತ್ತು ಅಹಿಂಸೆಯ ಆರಾಧಕರು. ಇವರನ್ನು ನಾವು ರಾಷ್ಟ್ರಪಿತ, ಬಾಪೂ ಎಂದೂ ಕರೆಯುತ್ತೇವೆ. ಗಾಂಧಿಯವರು ಇಡೀ ಬಾಳನ್ನು ಸತ್ಯಶೋಧನೆಗಾಗಿ ಮುಡಿಪಿಟ್ಟರು. ಅನ್ಯಾಯ ಮತ್ತು ಶೋಷಣೆಯನ್ನು ವಿರೋಧಿಸಿದರು. ವಿದೇಶೀವಸ್ತುಗಳ ಬಹಿಷ್ಕಾರ, ಸ್ವದೇಶಿವಸ್ತುಗಳಿಗೆ ಪುರಸ್ಕಾರ, ಗ್ರಾಮೀಣ ಸ್ವಾವಲಂಬನೆ, ಅಸ್ಪೃಶ್ಯತೆಯ ನಿವಾರಣೆ, ಮದ್ಯಪಾನ ನಿಷೇಧ, ಹಿಂದೂ ಮುಸಲ್ಮಾನರ ಐಕ್ಯ, ದೇಶೀಯ ಭಾಷೆಗಳಿಗೆ ಉತ್ತೇಜನ ಇವು ಅವರು ದೇಶದ ಮುಂದೆ ಇರಿಸಿದ ವಿಧಾಯಕ ಕಾರ್ಯಕ್ರಮಗಳು. ಉಪ್ಪಿನ ಸತ್ಯಾಗ್ರಹ, ಕರನಿರಾಕರಣೆ, ಅಸಹಕಾರ ಚಳುವಳಿ, ಕಾಯಿದೆ ಭಂಗ ಹೋರಾಟ, ಆಮರಣ ಉಪವಾಸ ಗಾಂಧೀಜಿ ನಡೆಸಿದ ಸ್ವಾತಂತ್ರ್ಯ ಹೋರಾಟದ ಹಂತಗಳು. ಕೊನೆಯಲ್ಲಿ ಗಾಂಧೀಜಿ ಆಂಗ್ಲರಿಗೆ "ಭಾರತ ಬಿಟ್ಟು ತೊಲಗಿ" ಎಂದರು. ಪ್ರತಿಯೊಬ್ಬ ಭಾರತೀಯನಿಗೂ "ಮಾಡು ಇಲ್ಲವೆ ಮಡಿ" ಎಂದು ಕರೆ ನೀಡಿದರು.

ಭಾರತಕ್ಕಾಗಿ ಹೋರಾಡಿದ ಇಂಥ ಮಹಾತ್ಮರು ಹುಟ್ಟಿದ್ದು ಸಾವಿರದ ಎಂಟುನೂರಾ ಅರವತ್ತೊಂಬತ್ತರ ಅಕ್ಟೋಬರ್ ಎರಡರಂದು. ಈ ದಿನವನ್ನು ಪ್ರತಿವರ್ಷ ರಾಷ್ಟ್ರೀಯ ಹಬ್ಬವೆಂದು ಆಚರಿಸುತ್ತಾರೆ. ಆ ದಿನ ಮಹಾತ್ಮಾಗಾಂಧಿಯವರ ಚಿತ್ರಕ್ಕೆ ಮಾಲಾರ್ಪಣೆ ಮಾಡುವರು. ರಾಷ್ಟ್ರಧ್ವಜವನ್ನು ಹಾರಿಸುವರು. ರಾಮಭಜನೆಯನ್ನು ಮಾಡುವರು.

ನಮ್ಮ ದೇಶದ ಈ ರಾಷ್ಟ್ರೀಯ ಸಂಕೇತಗಳನ್ನು ಇಷ್ಟು ವಿವರವಾಗಿ ತಿಳಿದಿರಲ್ಲವೇ? ಇವು ಕೇವಲ ಗುರುತುಗಳಲ್ಲ. ನಮ್ಮೆಲ್ಲರನ್ನೂ ಒಗ್ಗೂಡಿಸಿ ತೋರುವ ಸಾಧನಗಳು ಎಂದು ತಿಳಿಯಿತಲ್ಲವೇ? ಇವುಗಳ ಬಗ್ಗೆ ಗೌರವ ಆದರಗಳನ್ನು

ತೋರುವುದೆಂದರೆ ನಮ್ಮ ಬಗೆಗೆ ನಾವು ತೋರಿದ ಗೌರವ ಆದರಗಳೆಂದು ತಿಳಿಯಬೇಕು. ಹಾಗೆಯೇ ಇವುಗಳಿಗೆ ಅವಮಾನವಾದರೆ ನಮಗೇ ಅವಮಾನವಾಯಿತೆಂದು ಭಾವಿಸಬೇಕು. ಹೀಗೆ ರಾಷ್ಟ್ರೀಯ ಸಂಕೇತಗಳು ನಮ್ಮ ಪ್ರತಿನಿಧಿಗಳೇ ಆಗಿವೆ.

* * *

ಕನ್ನಡ ವಿಶ್ವವಿದ್ಯಾಲಯವು ನ... ...ಗೆ ಉತ್ತಮ ಹಾಗೂ ಉಪಯುಕ್ತವಾದ ... ರಚನಾ ವಿಭಾಗ'ವನ್ನು ತೆರೆದಿದೆ. ... ರಚನೆ ಮಾಡಬೇಕೆಂದು ಚಿಂತಿಸುತ್ತಿ... ...ರಿಗಾಗಿ ಪುಸ್ತಕ ಬರೆಸುವ ತಮ್ಮಲ್ಲಿ... ...ಟ್ಟರು. ವಿಶ್ವವಿದ್ಯಾಲಯವು ಈ ಯೋ... ...ಕರನ್ನು, ಭಾಷಾತಜ್ಞರನ್ನು, ಶಿಕ್ಷಣತಜ್ಞ... ...ಪ್ರಾಯ, ಸಲಹೆ, ಸಹಕಾರಗಳನ್ನು ಕೇಳಿ... ...ನ್ಯಾಸ, ಚಿತ್ರಗಳ ಮಹತ್ವ, ಸಾಹಿತ್ಯಕ... ...ರ್ಚಿಸಿ ಯೋಜನೆಯನ್ನು ಅನುಷ್ಠಾನ...

ನವಸಾಕ್ಷರರಿಗಾಗಿ ಕನ್ನಡ... ...ಗಿರುವ ಪುಸ್ತಕಗಳನ್ನೆಲ್ಲ ಒಟ್ಟುಗೂ... ...ಜ್ಞರಿಂದ ಪರಿಶೀಲಿಸಲಾಯಿತು. ಜೊತೆ... ...ಅವರಿಗೆ ಕಮ್ಮಟಗಳನ್ನು ನಡೆಸಿ, ಪ್ರ... ಜಿಲ್ಲೆ, ತಾಲೂಕುಗಳಿಗೆ ಕಳುಹಿಸಿ ಈ... ಅದರ ಗುಣದೋಷಗಳ ಬಗ್ಗೆ ಅಭಿಪ್ರಾ... ...ಲಯದ ಗಣಕಯಂತ್ರದಲ್ಲಿ ವಿಶ್ಲೇಷಿಸ... ...ನೀಡಿದ್ದ ಮಾಹಿತಿಗಳನ್ನೆಲ್ಲ ಮರು ಪರಿ... ...ಷಯದ ಆದ್ಯತೆಗಳನ್ನು ನಿರ್ಧರಿಸಿಕೊ... ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪ... ...ಟ್ಟರು. ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು